# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ಗುಡದಯ್ಯ ರಾಮಪ್ಪ ಕೊಪ್ಪದ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 31**–10–2019 ರಂದು ಗುರುವಾರ 11–30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

## ಸಭೆಗೆ ಹಾಜರಿದ್ದ ಸದಸ್ಯರು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಅಧ್ಯಕ್ಷರು |
| 2 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ಉಪಾಧ್ಯಕ್ಷರು |
| 3 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ಸದಸ್ಯರು |
| 4 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 5 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 6 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 7 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ,, |
| 8 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ,, |
| 9 | ಶ್ರೀ ನೀಲಪ್ಪ ಈರಪ್ಪ ಹತ್ತಿ | ,, |
| 10 | ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 11 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 12 | ಶ್ರೀ ಓಂಪ್ರಕಾಶ ಪುಕರಾಜ ಜೈನ್ | ,, |
| 13 | ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ | ,, |
| 14 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

## ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |
| 2 | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾ.ಅ.ಯೋ. ಗದಗ | ಅಭಿಯಂತರರು |

ವಿಷಯ ನಂ–1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ–1) ದಿನಾಂಕ: 21-09-2019 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ,
ಅನುಮೋದಕರು: ಶ್ರೀ ವೆಂಕರೆಡ್ಡಿ ಬಸವರೆಡ್ಡಿ ಸ. ಹೊಂಬಳ

ವಿಷಯ ನಂ–2) 2019–20 ನೇ ಸಾಲಿನ **ಸೆಪ್ಟಂಬರ್** ತಿಂಗಳ ಸಮಿತಿಯ ಆದಾಯ–ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ–2) 2019–20 ನೇ ಸಾಲಿನ **ಸೆಪ್ಟೆಂಬರ್** ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2019 ನೇ ಸಾಲಿನ ಸಪ್ಟೆಂಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 1.50%<br>ಬ) ಜಾನುವಾರು ಮಾ.ಶುಲ್ಕ | 5,93,165–00<br>1,211–00 | 1 | ಭದ್ರತಾ ಸಿಬ್ಬಂದಿ ಇ–ಟೆಂಡರ (2019 ಅಗಷ್ಟ ತಿಂಗಳ) | 2,05,154–00 |
| | | | 2 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 15,400–00 |
| | | | 3 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 6,000–00 |
| 2 | ಶುದ್ಧ ನೀರಿನ ಘಟಕ | 6,430–00 | 4 | ಸದಸ್ಯರ ಸಭಾ ಭತ್ತೆ ಮತ್ತು ಸಿಟ್ಟಿಂಗ್ ಫೀ | 7,218–00 |
| 3 | ಲೀವ್ & ಲೈಸನ್ಸ್ ಶುಲ್ಕ | 3,976–00 | 5 | ಸಭೆಯ ವೆಚ್ಚ | 2,275–00 |
| 4 | ಲೈಸನ್ಸ ಶುಲ್ಕ | 9,000–00 | 6 | ಕಛೇರಿ ನಿರ್ವಹಣೆ | 6,260–00 |
| 5 | ದಂಡ | 42,036–00 | 7 | ಅಂಚೆ ತಂತಿ | 1,060–00 |
| 6 | ಬಡ್ಡಿ | 4,873–00 | 8 | ದಿನ ಪತ್ರಿಕೆ | 155–00 |
| | | | 9 | ದೂರವಾಣಿ ಬಿಲ್ | 3,820–00 |
| | | | 10 | ಸಾದಿಲ್ವಾರ | 7,060–00 |
| | | | **11** | ವಿದ್ಯುತ್ ಬಿಲ್ | 35,890–00 |
| | | | **12** | ಜೀಪ ಇಂಧನ ದುರಸ್ತಿ | 4,762–00 |
| | **ಒಟ್ಟು ರೂ.** | **6,60,691–00** | | **ಒಟ್ಟು ರೂ.** | **2,95,054–00** |
| | **ಕೊರತೆ** | **–** | | **ಉಳಿತಾಯ** | **3,65,637–00** |
| | **ಅಂತೂ** | **6,60,691–00** | | **ಅಂತೂ** | **6,60,691–00** |

ಸೂಚಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ,
ಅನುಮೋದಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ,

**ವಿಷಯ ನಂ–3)** ಸಮಿತಿಯ 1000 ಎಂ.ಟಿ. ಗೋದಾಮನ್ನು ಲೀವ್ & ಲೈಸನ್ಸ್ ಫೀ (ಬಾಡಿಗೆ) ತಳಹದಿಯ ಮೇಲೆ ಹಂಚಿಕೆ ಮಾಡಲು ಕೋರಿ, ಮಾನ್ಯ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಶಾಖೆ ಲಕ್ಷ್ಮೇಶ್ವರ ಇವರು ವಿನಂತಿಸಿಕೊಂಡ ಅರ್ಜಿ ಕುರಿತು ವಿಚಾರ.

**ಠರಾವ ನಂ–3)** ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವಾಯ್ ಯೋಜನೆಯಡಿಯಲ್ಲಿ ನಿರ್ಮಿಸಿರುವ 1000 ಎಂ.ಟಿ ಗೋದಾಮನ್ನು ಲೀವ್ & ಲೈಸನ್ಸ್ ಫೀ (ಬಾಡಿಗೆ) ತಳಹದಿಯ ಮೇಲೆ ಹಂಚಿಕೆ ಮಾಡಲು ಕೋರಿ, ಮಾನ್ಯ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಶಾಖೆ ಲಕ್ಷ್ಮೇಶ್ವರ ಇವರು ವಿನಂತಿಸಿಕೊಂಡು ದಿನಾಂಕ: 17–10–2019 ರಂದು ಸಲ್ಲಿಸಿರುವ ಪತ್ರವನ್ನು ಸಮಿತಿಯ ಗಮನಕ್ಕೆ ತರಲಾಯಿತು. ಅಲ್ಲದೇ ಸದರಿಯವರಿಗೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರ ಇವರ ಪತ್ರ ಸಂಖ್ಯೆ/ಕೃಮಾಇ/ಅಭಿಕೆ–1/ಇತರೆ/530/2017, ದಿನಾಂಕ: 04–07–2018 ರಲ್ಲಿ ಸಮಿತಿಯ ಗೋದಾಮುಗಳನ್ನು ಪ್ರತಿ ಚದುರ ಅಡಿಗೆ ರೂ. 5–00 ರಂತೆ ಮಾಸಿಕ ಲೀವ್ & ಲೈಸನ್ಸ ಫೀ ಆಧಾರದ ಮೇಲೆ ಹಂಚಿಕೆಗೆ ಕ್ರಮ ವಹಿಸಬಹುದೆಂದು ನಿರ್ದೇಶಿಸಿರುವುದನ್ನು ಈ ಸಮಿತಿಯ ಪತ್ರ ದಿ: 21–10–2019 ರ ಮೂಲಕ ಸದರಿಯವರಿಗೆ ತಿಳಿಸಿರುವುದನ್ನು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ, ಗದಗ ಇವರು ಸದರಿ ಗೋದಾಮನ್ನು ಅನ್ನಭಾಗ್ಯ ಯೋಜನೆಯಡಿಯಲ್ಲಿ ಆಹಾರ ಧಾನ್ಯ ದಾಸ್ತಾನಿಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಲಕ್ಷ್ಮೇಶ್ವರ ಸಗಟು ಮಳಿಗೆಗೆ ಪ್ರತಿ ಚದುರ ಅಡಿಗೆ ರೂ. 5-00 ರಂತೆ (ಜಿ.ಎಸ್.ಟಿ ಸೇರಿ) ನಿಗಧಿಪಡಿಸಿ ಒಟ್ಟು 6885 ಚ.ಅ. ಗೆ ರೂ.34425-00 ರಂತೆ ಮಾಸಿಕ ಲೀವ್ & ಲೈಸನ್ಸ ಫೀಯನ್ನು ನಿಗಧಿಪಡಿಸಿ ಆದೇಶಿಸಿ ಸದರಿ ಗೋದಾಮನ್ನು ದಿನಾಂಕ:01-11-2019 ರಿಂದ ತಮ್ಮ ವಶಕ್ಕೆ ಪಡೆದಿರುವುದನ್ನು ಸಭೆಯಲ್ಲಿ ಅವಲೋಕಿಸಲಾಯಿತು.

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 1000 ಎಂ.ಟಿ ಗೋದಾಮು ಪ್ರತಿ ಚದುರ ಅಡಿಗೆ ರೂ. 5-00 ರಂತೆ (ಜಿ.ಎಸ್.ಟಿ ಸೇರಿ) 6885 ಚ.ಅ.ಗೆ ಒಟ್ಟು ರೂ. 34425-00 ಪ್ರತಿ ಮಾಹೆ ಲೀವ್ & ಲೈಸನ್ಸ ಫೀಯಂತೆ ಅನ್ನಭಾಗ್ಯ ಯೋಜನೆಯಡಿಯಲ್ಲಿ ಆಹಾರ ಧಾನ್ಯ ದಾಸ್ತಾನಿಗಾಗಿ ಮಾನ್ಯ ವ್ಯವಸ್ಥಾಪಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ಲಕ್ಷ್ಮೇಶ್ವರ ಇವರಿಗೆ ಹಂಚಿಕೆ ಮಾಡಿರುವದನ್ನು ಒಪ್ಪಿ, ಈ ಕುರಿತು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರ ಇವರಿಂದ ಮಂಜೂರಾತಿ ಪಡೆಯಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಮುತ್ತವ್ವ ಪರಸಪ್ಪ ಮಾಗಡಿ,
ಅನುಮೋದಕರು: ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ

**ವಿಷಯ ನಂ-4)** ಕೃ.ಉ.ಮಾ.ಸ. ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮೇಲ್ಛಾವಣಿಯಲ್ಲಿ ನಿರ್ಮಿಸಿರುವ ಮೀಟಿಂಗ್ ಹಾಲ್ ಮತ್ತು ಅಧ್ಯಕ್ಷರ ಉಪಾಧ್ಯಕ್ಷರ ಕೊಠಡಿಯ ಮುಂದುಗಡೆ ನೆಲಹಾಸು (ಟೈಲ್ಸ ಜೋಡಿಸುವುದು) ಕಾಮಗಾರಿಗೆ ಬಂದ ಟೆಂಡರ್‌ನ್ನು ಒಪ್ಪುವ ಕುರಿತು. (ನಿಯಮ 71 ರಡಿ)

**ಠರಾವ ನಂ-4)** ಕೃ.ಉ.ಮಾ.ಸ. ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮೇಲ್ಛಾವಣಿಯಲ್ಲಿ ನಿರ್ಮಿಸಿರುವ ಮೀಟಿಂಗ್ ಹಾಲ್ ಮತ್ತು ಅಧ್ಯಕ್ಷರ ಉಪಾಧ್ಯಕ್ಷರ ಕೊಠಡಿಯ ಮುಂದುಗಡೆ ನೆಲಹಾಸು (ಟೈಲ್ಸ ಜೋಡಿಸುವುದು) ಕಾಮಗಾರಿಗೆ ಸಮಿತಿಯಿಂದ ಕರೆದಿರುವ ಟೆಂಡರನ್ನು ಪರಿಶೀಲಿಸಲಾಯಿತು. ಸದರಿ ಕಾಮಗಾರಿಗೆ ಟೆಂಡರಗಳನು ಸಲ್ಲಿಸಲು ಕೊನೆಯ ದಿನಾಂಕ:04-11-2019 ಇರುವದನ್ನು ಸಭೆಯಲ್ಲಿ ಕಾರ್ಯದರ್ಶಿಯವರು ಗಮನಕ್ಕೆ ತಂದರು, ಸದರಿ ಕಾಮಗಾರಿಗಳನ್ನು ಕೈಗೊಳ್ಳುವದು ಅವಶ್ಯಕತೆ ಇರುವುದನ್ನು ಮನಗಂಡು, ಸಲ್ಲಿಸಲ್ಪಡುವ ಟೆಂಡರಗಳಲ್ಲಿ ಕಡಿಮೆ ದರ ಸೂಚಿಸುವ ಗುತ್ತಿಗೆದಾರರಿಗೆ ಕೆಲಸವನ್ನು ನಿರ್ವಹಿಸಲು ಕಾರ್ಯಾದೇಶ ನೀಡುವಂತೆ ಹಾಗೂ ಮುಂದಿನ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ದೃಢೀಕರಿಸಿಕೊಳ್ಳಲು ಸೂಚಿಸಿ ವಿಷಯವನ್ನು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀ ಓಂ ಪ್ರಕಾಶ ಘುಕರಾಜ ಜೈನ್,

**ವಿಷಯ ನಂ-5)** ಕೃ.ಉ.ಮಾ.ಸ. ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಚೇರಿಯ ಮೊದಲನೇ ಮಹಡಿಯಲ್ಲಿ ಸಭಾ ಭವನ ಮತ್ತು ಅಧ್ಯಕ್ಷರ, ಉಪಾಧ್ಯಕ್ಷರ ಕೊಠಡಿಗಳಿಗೆ ವಿದ್ಯುತ್ ಅಳವಡಿಸುವ ಕಾಮಗಾರಿಗೆ ಬಂದ ಟೆಂಡರ್‌ನ್ನು ಒಪ್ಪುವ ಕುರಿತು.

**ಠರಾವ ನಂ-5)** ಕೃ.ಉ.ಮಾ.ಸ. ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಚೇರಿಯ ಮೊದಲನೇ ಮಹಡಿಯಲ್ಲಿ ಸಭಾ ಭವನ ಮತ್ತು ಅಧ್ಯಕ್ಷರ, ಉಪಾಧ್ಯಕ್ಷರ ಕೊಠಡಿಗಳಿಗೆ ವಿದ್ಯುತ್ ಅಳವಡಿಸುವ ಕಾಮಗಾರಿಗೆ ಸಮಿತಿಯಿಂದ ಕರೆದಿರುವ ಟೆಂಡರನ್ನು ಪರಿಶೀಲಿಸಲಾಯಿತು. ಸದರಿ ಕಾಮಗಾರಿಗೆ ಟೆಂಡರಗಳನು ಸಲ್ಲಿಸಲು ಕೊನೆಯ ದಿನಾಂಕ:04-11-2019 ಇರುವದನ್ನು ಸಭೆಯಲ್ಲಿ ಕಾರ್ಯದರ್ಶಿಯವರು ಗಮನಕ್ಕೆ ತಂದರು, ಸದರಿ ಕಾಮಗಾರಿಗಳನ್ನು ಕೈಗೊಳ್ಳುವದು ಅವಶ್ಯಕತೆ ಇರುವುದನ್ನು ಮನಗಂಡು, ಸಲ್ಲಿಸಲ್ಪಡುವ ಟೆಂಡರಗಳಲ್ಲಿ ಕಡಿಮೆ ದರ ಸೂಚಿಸುವ ಗುತ್ತಿಗೆದಾರರಿಗೆ ಕೆಲಸವನ್ನು ನಿರ್ವಹಿಸಲು ಕಾರ್ಯಾದೇಶ ನೀಡುವಂತೆ ಹಾಗೂ ಮುಂದಿನ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ದೃಢೀಕರಿಸಿಕೊಳ್ಳಲು ಸೂಚಿಸಿ ವಿಷಯವನ್ನು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ,
ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ

**ವಿಷಯ ನಂ-6)** 2019-20 ನೇ ಸಾಲಿನಿಂದ ಮುಂದಿನ ಅವಧಿಗೆ ಲೈಸನ್ಸ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ, ಮಂಜೂರಾತಿ ಮಾಡುವ ಕುರಿತು.

**ಠರಾವ ನಂ-6)** ಈ ಕೆಳಕಾಣಿಸಿದ ಅರ್ಜಿದಾರರು ಸಮಿತಿಯಿಂದ ಲೈಸನ್ಸ ಕೋರಿ ಅವಶ್ಯಕ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ್ದು ಅವರುಗಳ ವಿವರವನ್ನು ಸಭೆಗೆ ಓದಿ ಹೇಳಲಾಯಿತು.

| ಕ್ರ. ಸಂ | ವರ್ತಕರ ಹೆಸರು ಮತ್ತು ವಿವರ | ದಲ್ಲಾಲರ ಲೈಸನ್ಸ |
|---|---|---|
| 1 | ಶ್ರೀ ದರ್ಶನ ಎಂಟಪ್ರೈಸಸ್, ಸಾ: ಲಕ್ಮೇಶ್ವರ, ಪ್ರೋ: ಶ್ರೀಮತಿ ರೂಪಾ ಪ್ರಕಾಶ ಕಾಟೇನಹಳ್ಳಿ | 01 |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೆಲ್ಕಾಣಿಸಿದಂತೆ ದಲ್ಲಾಲಿ ಲೈಸಸನ್ನು 10 ವರ್ಷದ ಅವಧಿಗೆ ಲೈಸನ್ಸ ಮಂಜೂರು ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಹೊಸದಾಗಿ ಸನ್ 2019-20 ನೇ ಸಾಲಿನ ಅವಧಿಗೆ**

| ಕ್ರ.ಸಂ | ಲೈಸನ್ಸ್‌ದಾರರ ವಿವರ | ಸಂಖ್ಯೆ |
|---|---|---|
| 1 | ಹಮಾಲರು | 03 |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೆಲ್ಕಾಣಿಸಿದ ಹಮಾಲರ ಲೈಸನ್ಸಗಳನ್ನು 01 ವರ್ಷದ ಅವಧಿಗೆ ಲೈಸನ್ಸ ಮಂಜೂರು ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಪುಲಕೇಶಿ ಗೂಳಪ್ಪ ಉಪನಾಳ,
ಅನುಮೋದಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ

**ವಿಷಯ ನಂ-7)** ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

**ವಿಷಯ ನಂ-7(1)** ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಕ್ಲೀನಿಂಗ್, ಗ್ರೇಡಿಂಗ್ & ಪ್ಯಾಕೇಜಿಂಗ್ ಘಟಕದ ವಿದ್ಯುತ್ ಬಿಲ್ಲ ಕಡಿಮೆಗೊಳಿಸಲು ಕ್ರಮ ವಹಿಸುವ ಬಗ್ಗೆ.

**ಠರಾವ ನಂ-7(1)** ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಕ್ಲೀನಿಂಗ್, ಗ್ರೇಡಿಂಗ್ & ಪ್ಯಾಕೇಜಿಂಗ್ ಘಟಕಕ್ಕೆ 70 ಕೆ.ವಿ. ವಿದ್ಯುತ್ ಸಂಪರ್ಕವನ್ನು ಪಡೆದಿದ್ದು ಪ್ರಸ್ತುತ ಸದರಿ ಘಟಕವು ಉಪಯೋಗದಲ್ಲಿರುವುದಿಲ್ಲ ಮತ್ತು ಅದನ್ನು ಕಾರ್ಯ ಮತ್ತು ನಿರ್ವಹಣೆಗಾಗಿ ಹಂಚಿಕೆ ಮಾಡಲು ಎರಡು ಬಾರಿ ಟೆಂಡರನ್ನು ಆಹ್ವಾನಿಸಿದ್ದು, ಯಾರು ಟೆಂಡರನಲ್ಲಿ ಭಾಗವಹಿಸದೇ ಇರುವದನ್ನು ಸಭೆಯ ಗಮನಕ್ಕೆ ತರಲಾಯಿತು. ಹಾಗೂ ಸದರಿ ಘಟಕಕ್ಕೆ ಪ್ರತಿ ತಿಂಗಳ ಅಂದಾಜು ರೂ. 12000-00 ವಿದ್ಯುತ್ ಶುಲ್ಕವನ್ನು ಬರಿಸುತ್ತಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಹಾಗೂ ಸದರಿ ಘಟಕಕ್ಕೆ ಪಡೆದಿರುವ 70 ಕೆ.ವಿ.ವಿದ್ಯುತ್ ಅವಶ್ಯಕವಿರುತ್ತದೆಂದು ಮತ್ತು ಅದನ್ನು ಕಾರ್ಯ ಮತ್ತು ನಿರ್ವಹಣೆಗಾಗಿ ಹಂಚಿಕೆ ಮಾಡಲು ಮತ್ತೊಮ್ಮೆ ಟೆಂಡರನ್ನು ಆಹ್ವಾನಿಸಲಾಗುವದೆಂದು ಸಭೆಯ ಗಮನಕ್ಕೆ ತರಲಾಯಿತು.

ಮೇಲಿನ ಎಲ್ಲ ವಿಷಯವನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಪ್ರಸ್ತುತ ಘಟಕವು ಉಪಯೋಗದಲ್ಲಿರದೇ ಇರುವದರಿಂದ ಮತ್ತು ಪ್ರತಿ ಮಾಹೆ ರೂ. 12000-00 ವಿದ್ಯುತ್ ಶುಲ್ಕ ಭರಿಸುತ್ತಿರುವದರಿಂದ ಸಮಿತಿಗೆ ಆರ್ಥಿಕ ಹೊರೆಯಾಗುತ್ತಿದ್ದು, ಸದರಿ ಘಟಕಕ್ಕೆ ಪಡೆದಿರುವ 70 ಕೆ.ವಿ.ಯ ಬದಲಾಗಿ ಕಡಿಮೆಗೊಳಿಸಿ ಕೇವಲ 10 ಕೆ.ವಿ. ವಿದ್ಯುತ್‌ನ್ನು ಪಡೆಯಲು ಹೆಸ್ಕಾಂ, ಲಕ್ಮೇಶ್ವರ ಇವರಿಗೆ ಪತ್ರ ಬರೆಯಲು ಸೂಚಿಸಿ, ಇದರಿಂದ ವಿದ್ಯುತ್ ಶುಲ್ಕವು ಕಡಿಮೆಗೊಳಿಸಬಹುದಾಗಿದೆ ಎಂದು ಮನಗಂಡು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅಲ್ಲದೇ ಸದರಿ ಘಟಕವನ್ನು ಯಾರಾದರೂ ಕಾರ್ಯ ಮತ್ತು ನಿರ್ವಹಣೆ ಆಧಾರದ ಮೇಲೆ ಪಡೆದು ನಿರ್ವಹಿಸಲು ಮುಂದು ಬಂದಲ್ಲಿ ಅಂತಹ ಸಮಯದಲ್ಲಿ ಪುನಃ 70 ಕೆ.ವಿ. ವಿದ್ಯುತ್ತನ್ನು ಮುಂದುವರಿಸಲು ಸೂಚಿಸಿ ಠರಾಯಿಸಲಾಯಿತು.

ಸೂಚಕರು: ಶ್ರೀ ಪಕ್ಕವ್ವ ಯಲ್ಲಪ್ಪ ಜೋಗಿ
ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ

**ವಿಷಯ ನಂ–7(2)** ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿಯಮ 71 ರಡಿಯಲ್ಲಿ ಕಾಮಗಾರಿ ಕೈಕೊಳ್ಳುವ ಬಗ್ಗೆ.

**ಠರಾವ ನಂ–7(2)** ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವಾಯ್ ಯೋಜನೆಯಡಿಯಲ್ಲಿ ನಿರ್ಮಿಸಿರುವ 1000 ಮೆ.ಟ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿ ಮಾಡಲು ಗಟಾರು ಮೇಲ್ಗಡೆ ಸಿ.ಡಿ ನಿರ್ಮಿಸುವು ಅವಶ್ಯಕತೆ ಇರುವದನ್ನು ಸಭೆಯಲ್ಲಿ ಅವಲೋಕಿಸಿ ಸದರಿ ಗೋದಾಮು ಮುಂದುಗಡೆ 2019–20 ನೇ ಸಾಲಿನಲ್ಲಿ ನಿಯಮ 71 ರಡಿಯಲ್ಲಿ ಸಿ.ಡಿ ನಿರ್ಮಿಸುವ ಕಾಮಗಾರಿಗಳನ್ನು ಕೈಕೊಳ್ಳಲು ತಿರ್ಮಾನಿಸಲಾಯಿತು. ಹಾಗೂ ಈ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಗದಗ ಇವರಿಂದ ಅಂದಾಜು ಪತ್ರಿಕೆಯನ್ನು ತಯಾರಿಸಿ ನಿಯಮಾನುಸಾರ ಕಾಮಗಾರಿಯನ್ನು ಮಾಡಿಸಲು ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ,

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿ | ಅಧ್ಯಕ್ಷರು |
| ಕೃ.ಉ.ಮಾ.ಸ.,ಲಕ್ಷ್ಮೇಶ್ವರ | ಕೃ.ಉ.ಮಾ.ಸ.,ಲಕ್ಷ್ಮೇಶ್ವರ |

'ನಕಲು ಪ್ರತಿ'



ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ